# ಕರ್ನಾಟಕ ಸರಕಾರದ ನಡುವಳಿಕೆಗಳು

(2)

ವಿಷಯ:- ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ **ಕಡಪಟ್ಟಿ** ಗ್ರಾಮದ ಜಮೀನುಗಳು ಹೆರಕಲ್ (ದಕ್ಷಿಣ) ಏತ ನೀರಾವರಿ ಯೋಜನೆಯ ಪಶ್ಚಿಮ ಮುಖ್ಯ ಕಾಲುವೆಯ ನಿರ್ಮಾಣಕ್ಕಾಗಿ ಭೂಸ್ವಾಧೀನ ಕುರಿತು (ನೀರಾವರಿ ಯೋಜನೆಗೆ) ಭೂಸ್ವಾಧೀನತೆಯ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಅಧಿನಿಯಮ-2013 ರನ್ವಯ ಕರಡು ಯಾದಿಯನ್ನು ಅನುಮೋದಿಸುವ ಕುರಿತು.

ಓದಲಾಗಿದೆ:- 1) ಭೂಸ್ವಾಧೀನ ಕಾಯ್ದೆ 2013ರ ಕಲಂ 11(1)ರ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ದಿನಾಂಕ: 20-11-2020 ರಂದು ಪ್ರಕಟಣೆಗೊಂಡಿರುತ್ತದೆ.

2) ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಕುರಿತು.

3) ಪುನರ್ವಸತಿ ಅಧಿಕಾರಿ, ಕೃ.ಮೇ.ಯೋ., ಬಾಗಲಕೋಟೆ ಇವರ ಕಛೇರಿ ಪತ್ರ ಸಂ:ಪುಅಬಾ/ ಆರ್‌ಆರ್‌ಎಪಿ/ಕಡಪಟ್ಟಿ/2021-22/238, ದಿ: 12-08-2021.

4) ಮಹಾ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃ.ಮೇ.ಯೋ., ನವನಗರ, ಬಾಗಲಕೋಟೆ ಇವರ ಕಛೇರಿಯ ಕಲಂ 17(2)ರಡಿ ಶಿಫಾರಸ್ಸು ದಿನಾಂಕ: 4-9-2021.

-00000-

ಆದೇಶ ಸಂ:ಕಂಇ/ಭೂಸ್ವಾ-2ಬಿ/ಸಿಆರ್-192/2021-22 1123 ದಿನಾಂಕ: 4-9-2021.

ಪುನರ್ವಸತಿ ಅಧಿಕಾರಿ, ಕೃ.ಮೇ.ಯೋ., ಬಾಗಲಕೋಟೆ ಇವರಿಂದ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ **ಕಡಪಟ್ಟಿ** ಗ್ರಾಮದ ಜಮೀನುಗಳು ಹೆರಕಲ್ (ದಕ್ಷಿಣ) ಏತ ನೀರಾವರಿ ಯೋಜನೆಯ ಪಶ್ಚಿಮ ಮುಖ್ಯ ಕಾಲುವೆಯ ನಿರ್ಮಾಣಕ್ಕಾಗಿ ಭೂಸ್ವಾಧೀನ ಕುರಿತು (ನೀರಾವರಿ ಯೋಜನೆಗೆ) ಜೆ.ಎಂ.ಸಿ. ಪ್ರಕಾರ ಒಟ್ಟು 05 ಎಕರೆ 08 ಗುಂಟೆ ಕ್ಷೇತ್ರಕ್ಕೆ ನೂತನ ಕಾಯ್ದೆ ಕಲಂ 16(2) ನೇದ್ದರ ಮೇರೆಗೆ ಗಣತಿ ಕಾರ್ಯವನ್ನು ಕೈಗೊಂಡು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಯಾದಿಯನ್ನು ತಯಾರಿಸಿದ್ದಾರೆ.

ಹೆಚ್ಚುವರಿ ವಿಶೇಷ ಭೂಸ್ವಾಧೀನಾಧಿಕಾರಿ ನಂ.1, ಕೃ.ಮೇ.ಯೋ., ಬಾಗಲಕೋಟೆ ಇವರನ್ನು ಈ ಯೋಜನೆಗೆ ಕಾರ್ಯವನ್ನು ನಿರ್ವಹಿಸಲು ನೇಮಿಸಲಾಗಿದೆ ಮತ್ತು ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಅನುಗುಣವಾಗಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಹಾಗೂ ಭೂಸ್ವಾಧೀನ ಕಾಯ್ದೆ 2013ರ ಕಲಂ 45 ರಡಿ ಪ್ರಕರಣದಲ್ಲಿ ಸದರಿ ಭೂಸ್ವಾಧೀನ ಪ್ರಕರಣದಲ್ಲಿ ಒಳಗೊಂಡ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಅನ್ವಯಿಸುವುದಿಲ್ಲ.

ನೂತನ ಭೂಸ್ವಾಧೀನ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆ 2013ರ ಕಲಂ 16(3)ರಡಿ ತಯಾರಿಸಲಾದ ಗಣತಿ ಯಾದಿಯಲ್ಲಿ ಜೆ.ಎಂ.ಸಿ. ಪ್ರಕಾರ ಒಟ್ಟು 05 ಎಕರೆ 08 ಗುಂಟೆ ಕ್ಷೇತ್ರ ಜಮೀನು ಸ್ವಾಧೀನಕ್ಕೆ ಒಳಪಡುತ್ತಿದ್ದು, ಈ ಪೈಕಿ ಒಟ್ಟು ಹದಿನೈದು (15) ಕುಟುಂಬಗಳು ಬಾಧಿತಗೊಳ್ಳುತ್ತಿದ್ದು, ಪ್ರಸ್ತುತ ನೂತನ ಭೂಸ್ವಾಧೀನ ಕಾಯ್ದೆ ಅನುಸಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾದ ಕ್ಷೇತ್ರವನ್ನು ಪರಿಗಣಿಸಿ ಈ ಕುಟುಂಬಗಳು ಅವರು ಹೊಂದಿದ ಕ್ಷೇತ್ರಕ್ಕಿಂತ ಬಹುಪಾಲು ಭೂಮಿಯನ್ನು ಕಳೆದುಕೊಳ್ಳುವುದಿಲ್ಲ. ಹಾಗೂ ಜೀವನೋಪಾಯ ನಷ್ಟತೆಯನ್ನು ಹೊಂದುವುದಿಲ್ಲ ಎಂಬುದರ ಬಗ್ಗೆ ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ., ಬಾಗಲಕೋಟೆ ರವರು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಯ ಯೋಜನೆಯ ಕರಡು ಯಾದಿಯನ್ನು ತಯಾರಿಸಿ ದೃಢಪಡಿಸಿದ್ದಾರೆ.

..2.

7-10-21

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ., ಆಲಮಟ್ಟಿ ಇವರು ಶಿಫಾರಸ್ಸು ಮಾಡಿರುವ ಯಾದಿಯನ್ನು ಆಧರಿಸಿ, ನೂತನ ಭೂದಸ್ವಾಧೀನ ಕಾಯ್ದೆ 2013ರ ಕಲಂ 84 ರನ್ವಯ ಸೌಲಭ್ಯ ಪಡೆಯುವ ಕುಟುಂಬವು ಸುಳ್ಳು ಮಾಹಿತಿ ನೀಡಿದಲ್ಲಿ ಕಲಂ 84 (1) (2) ಹಾಗೂ (3) ರನ್ವಯ ಶಿಕ್ಷೆಗೆ ಗುರಿಪಡಿಸಲಾಗುವುದೆಂಬ ಷರತ್ತಿಗೆ ಒಳಪಟ್ಟು ಪುನರ್‌ವ್ಯವಸ್ಥೆ ಯೋಜನೆಯ ಪ್ರಸ್ತಾವನೆಯನ್ನು ಭೂಸ್ವಾಧೀನ ಅಧಿನಿಯಮ 2013ರ ಕಲಂ 18ರಡಿ ಅನುಮೋದಿಸಿದೆ.

ಕಾಯ್ದೆ ಕಲಂ 41(6)ರಡಿ ಅನುಸೂಚಿತ ಪಂಗಡ ಹಾಗೂ ಬುಡಕಟ್ಟು ಜನಾಂಗಗಳಿಗೆ ಭೂಸ್ವಾಧೀನ ಪ್ರಕರಣಗಳು ಒಳಪಟ್ಟಿದ್ದಲ್ಲಿ ಸ್ವಾಧೀನದ ಸ್ವತ್ತುಗಳ ಶೇಕಡಾ 1/3 ರಷ್ಟು ಪರಿಹಾರಧನವನ್ನು ಸ್ವಾಧೀನ ಪೂರ್ವದಲ್ಲಿ ಬಾಧಿತ ಕುಟುಂಬಗಳಿಗೆ ಪಾವತಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

| |
|---|
| ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ. |

ಆಯುಕ್ತರು,
ಪುಪು ಮತ್ತು ಭೂಸ್ವಾಧೀನ, ಕೃಮೇಯೋ,
ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು,
ಕರ್ನಾಟಕ ಸರಕಾರ, ಕಂದಾಯ ಇಲಾಖೆ,
ನವನಗರ, ಬಾಗಲಕೋಟೆ
ಇವರ ಪರವಾಗಿ.

ಇವರಿಗೆ:

1. ಮಹಾ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃ.ಮೇ.ಯೋ., ನವನಗರ, ಬಾಗಲಕೋಟೆ ಇವರಿಗೆ.
2. ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ ಇವರಿಗೆ ಮಾಹಿತಿ ಕುರಿತು ಕಳುಹಿಸಿದೆ.
3. ವಿಶೇಷ ಜಿಲ್ಲಾಧಿಕಾರಿ, ಕೃ.ಮೇ.ಯೋ. ನವನಗರ, ಬಾಗಲಕೋಟೆ ಇವರಿಗೆ ಮಾಹಿತಿ ಕುರಿತು ಕಳುಹಿಸಿದೆ.
4. ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಬಾಗಲಕೋಟೆ ಇವರಿಗೆ ಸಂಬಂಧಪಟ್ಟ ಕಡತದೊಂದಿಗೆ ಹಿಂದಿರುಗಿಸಲಾಗಿದೆ.
5. ಹೆಚ್ಚುವರಿ ವಿಶೇಷ ಭೂಸ್ವಾಧೀನಾಧಿಕಾರಿ ನಂ.1, ಕೃ.ಮೇ.ಯೋ. ಬಾಗಲಕೋಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ
6. ಉಪ ವಿಭಾಗಾಧಿಕಾರಿ, ಉಪ-ವಿಭಾಗ, ಬಾಗಲಕೊಟೆ ಇವರಿಗೆ ಮಾಹಿತಿಗಾಗಿ.
7. ತಹಶೀಲ್ದಾರರು, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ.
8. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ.
9. Website:www.bagalkot.nic.in/ukp ಅಂತರಜಾಲದಲ್ಲಿ ಅಳವಡಿಸಲು ಸಿಸ್ಟಂ ಮ್ಯಾನೇಜರ್, ಕಂಪ್ಯೂಟರ್ ವಿಭಾಗ, ಪು ಮತ್ತು ಪು, ಕೃಮೇಯೋ, ನವನಗರ, ಬಾಗಲಕೋಟೆ ಇವರಿಗೆ.
10. ಭೂಸ್ವಾಧೀನ ಶಾಖೆಗೆ.